೮
ಅಕ್ಟೋಬರ್ ಗುರುವಾರ

ನೀನಾಸಮ್ ತಿರುಗಾಟ ತಂಡದ ನಾಟಕ - ಗುಣಮುಖ
ರಚನೆ: ಪಿ. ಲಂಕೇಶ್
ನಿರ್ದೇಶನ: ಮಂಜು ಕೊಡಗು

೧೯೩೦ರಲ್ಲಿ ಪಿ.ಲಂಕೇಶ್ ಅವರು ರಚಿಸಿದ ಕನ್ನಡ ನಾಟಕ 'ಗುಣಮುಖ' ಕೃತಿಯು ೧೪ನೆಯ ಶತಮಾನದಲ್ಲಿ ಪರ್ಷಿಯಾದಿಂದ ಭಾರತಕ್ಕೆ ದಂಡೆತ್ತಿ ಬಂದು, ಇಲ್ಲಿ ಆಳುತ್ತಿದ್ದ ಮೊಘಲರನ್ನು ಸೋಲಿಸಿ ಕೆಲಕಾಲ ಆಡಳಿತ ನಡೆಸಿದ ನಾದಿರ್‌ಶಾನನ್ನು ಕೇಂದ್ರವ್ಯಕ್ತಿಯಾಗಿ ಇಟ್ಟುಕೊಂಡಿರುವಂಥದು. ಇತಿಹಾಸದ ವಸ್ತುವನ್ನು ಸಮಕಾಲೀನ ಕ್ರೌರ್ಯ-ಹಿಂಸೆಯ ತಲ್ಲಣಗಳಿಗೆ ರೂಪಕವಾಗಿ ನೋಡುತ್ತ ಅಂಥ ರೋಗದಿಂದ ಗುಣಮುಖವಾಗುವ ದಾರಿ ಹೇಗಿರಬಹುದು ಎಂಬುದನ್ನು ಪರಿಶೀಲಿಸುವ ವಿಶಿಷ್ಟ ನಾಟಕ ಕೃತಿ ಇದು.

ಈ ನಾಟಕ ಆರಂಭವಾಗುವಾಗ ನಾದಿರ್‌ಶಾ ದಂಡಯಾತ್ರೆಯಲ್ಲಿ ಗೆದ್ದಿದ್ದಾನೆ; ಆದರೆ, ಖಾಸಗಿ ಬದುಕಿನಲ್ಲಿ ರೋಗಗ್ರಸ್ತನಾಗಿದ್ದಾನೆ. ಅವನ ಅಧಿಕಾರದ ಆವರಣದಲ್ಲಿ ಉಲ್ಬಣಗೊಳ್ಳುತ್ತ ಹೋಗುವ ಚಿತ್ರವಿಚಿತ್ರವಾದ ರೋಗಗಳಿದ್ದಾವೆ – ಭಟ್ಟಂಗಿತನದ ರೋಗ, ಒಳಸಂಚು-ಪಿತೂರಿಯ ರೋಗ, ಆತ್ಮಾಭಿಮಾನವನ್ನು ಕಳೆದುಕೊಂಡ ರೋಗ, ಕ್ರೌರ್ಯದಲ್ಲಿಯೇ ಸತ್ಯವನ್ನು ಕಾಣಲಿಕ್ಕೆ ಹೊರಟ ರೋಗ ಇತ್ಯಾದಿ. ನಾಟಕ ಮುಂದುವರೆದಂತೆ, ಮಕ್ಕಳಾಟಿಕೆಯೆನ್ನುವಂತೆ ಎರಡು ಕೊಲೆ ಮಾಡಿರುವ ನಾದಿರ್‌ಶಾ ಉಲ್ಬಣದ ಉತ್ತುಂಗ ಮುಟ್ಟಿದ್ದಾನೆ; ಅಷ್ಟರಲ್ಲಿ ಈ ರೋಗ ಒಂದು ಅಪರಿಹಾರ್ಯ ಆಧ್ಯಾತ್ಮಿಕ ಬಿಕ್ಕಟ್ಟಾಗಿ ಬೆಳೆದುಕೊಂಡಿದೆ. ಆಗ ಅಲಾವಿಖಾನ್ ಎಂಬ ಬಡ ಹಕೀಮ ಬಂದು ನಾದಿರ್‌ಶಾನನ್ನು ಚಿಕಿತ್ಸೆಗೆ ಒಳಪಡಿಸುತ್ತಾನೆ; ಮೊದಲು ಅದನ್ನು ಪ್ರತಿರೋಧಿಸುವ ನಾದಿರ್ ಕ್ರಮೇಣ ಅಲಾವಿ ಖಾನ್‌ನ ಚಿಕಿತ್ಸೆಯನ್ನು ಅರಿಯಲಾರಂಭಿಸುತ್ತಾನೆ; ಮತ್ತು, ಆ ಮೂಲಕ ಅವನ ಮನೋದೈಹಿಕ ಬೇನೆಗಳು ಗುಣಮುಖಗೊಳ್ಳುವ ಸಾಧ್ಯತೆಯಲ್ಲಿ ನಾಟಕ ಮುಗಿಯುತ್ತದೆ.

ತಿರುಗಾಟ ನಾಟಕ

೯
ಅಕ್ಟೋಬರ್ ಶುಕ್ರವಾರ

ನೀನಾಸಮ್ ತಿರುಗಾಟ ತಂಡದ ನಾಟಕ - ತಾರ್ತೂಫ್
ರಚನೆ: ಮೋಲಿಯೆರ್, ಕನ್ನಡಕ್ಕೆ: ಎ.ಎನ್. ಮೂರ್ತಿರಾವ್;
ನಿರ್ದೇಶನ: ಗಣೇಶ ಎಂ.

೧೭ನೆಯ ಶತಮಾನದ ಫ್ರೆಂಚ್ ನವೋದಯ ಕಾಲದ ನಾಟಕ ಪರಂಪರೆಯಲ್ಲಿ ತನ್ನ ವಿಶಿಷ್ಟ ವೈನೋದಿಕಗಳಿಂದ ಹೆಸರಾದ ಮೋಲಿಯೆರ್ ಅಂದಿನಿಂದ ಇಂದಿನವರೆಗೂ ಎಲ್ಲ ವರ್ಗಗಳಿಗೂ ಪ್ರಿಯವಾಗುವಂಥವನು. ಈತ ಪ್ರಸಿದ್ಧ ದೊರೆ ೧೬ನೆಯ ಲೂಯಿಯ ಆಸ್ಥಾನದಲ್ಲೇ ಇದ್ದವನಾದರೂ ಈತನ ಮೂಲ ಪ್ರೇರಣೆ ಆ ಕಾಲದ ಐರೋಪ್ಯ ಜನಪದ ರಂಗಭೂಮಿ ಕಮೆಡಿಯಾ ಡೆಲ್ ಆರ್ಟೆಯಾಗಿತ್ತು. ಆ ಕಮೆಡಿಯಾ ಪ್ರಕಾರದ ಸಿದ್ಧ ಮಾದರಿಯ ಪಾತ್ರ-ಸನ್ನಿವೇಶ-ನಾಟಕೀಯತೆಗಳನ್ನು ಅನುಸರಿಸುತ್ತಲೇ ಮೋಲಿಯೆರ್ ತನ್ನ ಕಾಲದ ಸಾಮಾಜಿಕ ವಾಸ್ತವಗಳಿಗೂ ಕನ್ನಡಿಯಾದವ.

ಈತನ ತಾರ್ತೂಫ್ ನಾಟಕವು ಮಧ್ಯಮವರ್ಗದ ಕುಟುಂಬವೊಂದನ್ನು ಧರ್ಮದ ಹೆಸರಲ್ಲಿ ಮೋಸಮಾಡಲು ಬಂದ ಆಷಾಡಭೂತಿಯೊಬ್ಬನ ಕಥೆ ಹೇಳುತ್ತದೆ. ತನ್ನ ಧಾರ್ಮಿಕತೆಯ ಸೋಗಿನ ಮೂಲಕ ಮನೆಮಂದಿಯನ್ನು ಮರುಳು ಮಾಡಿದ್ದ ಈತನ ಕುರಿತು ಮನೆಯ ಕೆಲಸದವಳಿಗೆ ಅನುಮಾನ ಮೂಡುತ್ತದೆ; ಮನೆಯ ಯಜಮಾನ ತನ್ನ ಮಗಳನ್ನೇ ಆತನಿಗೆ ಮದುವೆ ಮಾಡಿಸಲು ಸಿದ್ಧನಾದಾಗ, ಆಕೆ ಮತ್ತು ಆಕೆಯ ಪ್ರಿಯಕರ ಕೆಲಸದವಳೊಂದಿಗೆ ಕೂಡಿ ಉಪಾಯ ಹೂಡುತ್ತಾರೆ; ಮತ್ತು ನಾಟಕೀಯ ಸಂಚಿನ ಮೂಲಕ ಸ್ವತಃ ತಾರ್ತೂಫನ ಬಣ್ಣ ಬಯಲುಮಾಡುತ್ತಾರೆ – ಇದು ಈ ನಾಟಕದ ಕಥಾಹಂದರ. ತನ್ನ ಕಾಲದ ಒಂದು ನಿರ್ದಿಷ್ಟ ಧಾರ್ಮಿಕ ಸಂಘಟನೆಯನ್ನು ಸೂಚಿಸಲೆಂದೇ ಮೋಲಿಯೆರ್ ಬರೆದಿದ್ದ ಎನ್ನಲಾಗುವ ಈ ನಾಟಕವು ಎಲ್ಲ ಕಾಲದೇಶಗಳ ಧಾರ್ಮಿಕ ಸೋಗಲಾಡಿತನವನ್ನೂ ಡಾಂಭಿಕತೆಯನ್ನೂ ವ್ಯಂಗ್ಯದ ಮೊನಚಿಗೆ ಒಳಪಡಿಸುವ ಪ್ರಹಸನ.

ತಿರುಗಾಟ ನಾಟಕ

೧೦
ಅಕ್ಟೋಬರ್ ಶನಿವಾರ

ನೀನಾಸಮ್ ತಂಡದ ನಾಟಕ - ಒರೆಸ್ತಿಸ್ ಪುರಾಣ
ರಚನೆ: ಏಸ್ಕೈಲಸ್, ಕನ್ನಡಕ್ಕೆ: ವಿಜಯಾ ಗುತ್ತಲ;
ನಿರ್ದೇಶನ: ಬಿ.ಆರ್. ವೆಂಕಟರಮಣ ಐತಾಳ

ಒರೆಸ್ತಿಸ್ ಪುರಾಣ ಏಸ್ಕೈಲಸ್‌ನ ಒರೆಸ್ತಿಯಾ ನಾಟಕತ್ರಿವಳಿಯ ಸಂಕ್ಷೇಪಿತ ರೂಪ. ಟ್ರಾಯ್ ಯುದ್ಧದಲ್ಲಿ ಗೆದ್ದು ಹಿಂದಿರುಗಿ ಬಂದ ದೊರೆ ಅಗಮೆಮ್ನಾನ್ ತನ್ನ ಹೆಂಡತಿ ಕ್ಲೈಟಮ್ನೆಸ್ಟ್ರಾ ಮತ್ತು ಆಕೆಯ ಪ್ರಿಯಕರ ಕೂಡಿ ಮಾಡಿದ ಸಂಚಿಗೆ ಬಲಿಯಾಗುವುದು ಮೊದಲ ನಾಟಕದ ಕಥೆ. ಎರಡನೆಯ ನಾಟಕದಲ್ಲಿ, ಅಗಮೆಮ್ನಾನ್‌ನ ಮಕ್ಕಳು ಎಲೆಕ್ಟ್ರಾ ಮತ್ತು ಒರೆಸ್ತಸ್ ತಂದೆಯ ಕೊಲೆಯ ಪ್ರತೀಕಾರಕ್ಕೆ ಕಾಯುತ್ತಾರೆ; ಒರೆಸ್ತಸ್ ತಾಯಿಯನ್ನು ಕೊಲ್ಲುತ್ತಾನೆ. ಮೂರನೆಯ ನಾಟಕದ ವಸ್ತು ಈ ಜೋಡಿ ಪಾತಕಗಳ ನ್ಯಾಯ ನಿರ್ಣಯ. ಈ ನ್ಯಾಯಸ್ಥಾನದಲ್ಲಿ ಹಳೆಯ-ಹೊಸ ಮಾನದಂಡಗಳು ಮುಖಾಮುಖಿಯಾಗುತ್ತವೆ. ಹಳೆಯ ಪೀಳಿಗೆಯ ಎರೀನಿಯಾ ದೇವತೆಗಳ ಪ್ರಕಾರ ಕ್ಲೈಟಮ್ನೆಸ್ಟ್ರಾ ಗಂಡನನ್ನು ಕೊಂದಿದ್ದು ಮಹಾಪಾಪವಲ್ಲ; ಯಾಕೆಂದರೆ ಅವನು ಅವಳಿಗೆ 'ರಕ್ತಸಂಬಂಧಿ'ಯಲ್ಲ. ಆದರೆ ಹೊಸ ಮೌಲ್ಯಗಳ ಪ್ರಕಾರ ಅದು ಕುಟುಂಬದ ಯಜಮಾನನ ಕೊಲೆ; ಹಾಗಾಗಿ ಶಿಕ್ಷಾರ್ಹ. ಏಸ್ಕೈಲಸನ ನಾಟಕದಲ್ಲಿ ಈ ಪರ ವಿರುದ್ಧದ ಅಭಿಪ್ರಾಯಗಳು ಸಮಸಮವಾಗಿ ಕಡೆಗೆ ಅಥನಾ ತನ್ನ ವಿಶೇಷ ಮತದಿಂದ ಒರೆಸ್ತಸ್‌ನನ್ನು ಪಾರುಮಾಡುತ್ತಾಳೆ; ಎರೀನಿಯಾ ದೇವತೆಗಳನ್ನು ಸಮಾಧಾನಪಡಿಸುತ್ತಾಳೆ. ಹೀಗೆ, ಮಾತೃ-ಪಿತೃಪ್ರಧಾನವ್ಯವಸ್ಥೆಗಳ, ರಕ್ತ-ಕುಟುಂಬಸಂಬಂಧಗಳ, ಕುಲ-ರಾಜ್ಯಗಳ ನಡುವೆ ಹೊಂದಾಣಿಕೆ ಸಾಧ್ಯವೆಂಬ ಆಶಯವನ್ನು ನಾಟಕ ಮುಂದಿಡುತ್ತದೆ. ಈ ನಾಟಕದ ವಸ್ತು 'ನೆಲಮಣ್ಣಿನ ಸತ್ಯದ ಮೇಲೆ ಗಂಡು ದರ್ಪದ ನ್ಯಾಯವು ನೆಲೆಗೊಂಡ ಕತೆಯಾಗಿ ಇತಿಹಾಸದಲ್ಲಿ ದಾಖಲಾಗುತ್ತದೆ' ಎಂದು ಈ ನಾಟಕದ ಪಾತ್ರವೊಂದು ಹೇಳುತ್ತದೆ. ಈ ಮಾತುಗಳನ್ನು ನಮ್ಮ ಕಾಲದೇಶಗಳಿಗೆ ಅನುವರ್ತಿಸುವ ಒಂದು ರಂಗಪ್ರಯತ್ನ ಇಲ್ಲಿದೆ.

ನೀನಾಸಮ್ ನಾಟಕ

೧೧
ಅಕ್ಟೋಬರ್ ಭಾನುವಾರ

ಆಹ್ವಾನಿತ ಮರಾಠಿ ಸಂಗೀತನಾಟಕ - ಮಾನಾಪಮಾನ್
ತಂಡ: ಭರತನಾಟ್ಯ ಸಂಶೋಧನ ಮಂದಿರ, ಪುಣೆ; ರಚನೆ: ಕೆ.ಪಿ. ಖಾಡಿಲ್ಕರ್
ಸಂಗೀತ: ಗೋವಿಂದರಾವ್ ಟೇಂಬೆ, ನಿರ್ದೇಶನ: ರವೀಂದ್ರ ಖರೆ

೨೦ನೆಯ ಶತಮಾನದ ಪ್ರಥಮಾರ್ಧದ ಮರಾಠಿಯಲ್ಲಿ ಜನಪ್ರಿಯತೆಯ ಉತ್ತುಂಗಕ್ಕೆ ತಲುಪಿದ ಸಂಗೀತನಾಟಕ ಸಂಪ್ರದಾಯದಲ್ಲಿ ತುಂಬ ಪ್ರಸಿದ್ಧಿಗಳಿಸಿದ್ದ ಮತ್ತು ಬಾಲಗಂಧರ್ವರ ಆದಿಯಾಗಿ ಹಲವು ಮಹಾನ್ ನಟರೊಡನೆ ಪ್ರಯೋಗಗೊಂಡ ನಾಟಕದ ಪುನರವತರಣಿಕೆ ಈ ಪ್ರಯೋಗ.

ರಾಜ ಪ್ರಥ್ವೀಧರನ ನಾಡಿನ ಮೇಲೆ ಪಕ್ಕದ ದೇಶಗಳಿಂದ ದಾಳಿ ನಡೆದಾಗ ಆತ ಧೈರ್ಯಧರನೆಂಬ ಬಡ ಸರದಾರನ ನೆರವು ಪಡೆಯುತ್ತಾನೆ. ಈ ಧೈರ್ಯಧರನ ಪರಾಕ್ರಮಕ್ಕೆ ಮೆಚ್ಚಿದ ಬಾಬಾಸಾಹೇಬ ತನ್ನ ಮಗಳು ಭಾಮಿನಿಯನ್ನು ಆತನಿಗೆ ಮದುವೆ ಮಾಡುವ ಪ್ರಸ್ತಾಪ ಮಾಡಿದಾಗ, ಆತ ಬಡವನೆಂದು ಭಾಮಿನಿ ನಿರಾಕರಿಸುತ್ತಾಳೆ; ಆಕೆಯ ನಿರಾಕರಣೆಯಿಂದ ಸಿಟ್ಟಾದ ಧೈರ್ಯಧರನೂ ಒಪ್ಪುವುದಿಲ್ಲ. ಆಗ ಬಾಬಾಸಾಹೇಬ ಮಗಳಿಗೆ ಒಂದು ತಿಂಗಳು ಯುದ್ಧರಂಗದಲ್ಲೇ ಮಾರುವೇಷದಲ್ಲಿದ್ದು ನಿಜವಾದ ಸಂಪತ್ತು ಯಾವುದೆಂಬುದನ್ನು ಕಲಿಯಲು ಸೂಚನೆ ಕೊಡುತ್ತಾನೆ; ಭಾಮಿನಿ ಒಪ್ಪುತ್ತಾಳೆ. ಅಲ್ಲಿ ಆಕೆಗೆ ಸತ್ಯದರ್ಶನವಾಗುತ್ತದೆ – ಶ್ರೀಮಂತನಾದರೂ ಹೇಡಿಯಾದ ಲಕ್ಷ್ಮೀಧರನೆಂಬ ಸೇನಾನಿ ಆಕೆಯನ್ನು ಮದುವೆಗೆ ಕೇಳಿದಾಗ, ಆಕೆ ಒಪ್ಪುವುದಿಲ್ಲ; ಬದಲು ಆಕೆಯ ನಿಜರೂಪ ಗೊತ್ತಿಲ್ಲದ ಧೈರ್ಯಧರನೇ ಆಕೆಯ ಮೇಲೆ ಮನಸ್ಸು ಮಾಡಿದಾಗ ಒಪ್ಪುತ್ತಾಳೆ. ಆದರೆ ರೂಪಾಂತರದಿಂದ ಉಂಟಾದ ಗೊಂದಲದಿಂದ ಮದುವೆಗೆ ಮತ್ತೆ ತೊಂದರೆ ಬರುತ್ತದೆ; ಕಡೆಗೆ ಬಾಬಾಸಾಹೇಬ ಸಂಶಯಗಳನ್ನು ಪರಿಹರಿಸಿ ಅವರ ಮದುವೆ ಮಾಡಿಸುತ್ತಾನೆ; ರಾಜನಿಂದ ಧೈರ್ಯಧರನಿಗೆ ಇನಾಮೂ ಸಿಗುತ್ತದೆ – ಇದು ನಾಟಕದ ಕಥಾಹಂದರ. ಸ್ವಾತಂತ್ರ್ಯಪೂರ್ವ ಕಾಲದ ಆದರ್ಶವಾದಿ ಕಥನವನ್ನು ಸಂಗೀತದೊಂದಿಗೆ ಸಂಗಮಿಸಿದ ವಿಶಿಷ್ಟ ಕೃತಿ ಇದು.

ಮರಾಠಿ ಸಂಗೀತ ನಾಟಕ

೧೨
ಅಕ್ಟೋಬರ್ ಸೋಮವಾರ

ಆಹ್ವಾನಿತ ರಂಗಪ್ರಯೋಗ - 'ಅಕ್ಕು'
ಬೆಂಗಳೂರಿನ ರಂಗಮಂಟಪ ತಂಡದಿಂದ
ನಿರ್ದೇಶನ: ಚಂಪಾ ಶೆಟ್ಟಿ

ಸಮಾಜದಲ್ಲಿ ಸಂಬಂಧಗಳ ಅರ್ಥವಂತಿಕೆಯನ್ನು ಮನವರಿಕೆ ಮಾಡಿಕೊಡುವ ಕೆಲಸವನ್ನು ಕಲೆಗಳು ಮಾಡಬೇಕೆನ್ನುವ ಕನಸಿನೊಂದಿಗೆ ಅಸ್ತಿತ್ವಕ್ಕೆ ಬಂದ ತಂಡ ರಂಗಮಂಟಪ. ಎಚ್. ನಾಗವೇಣಿ ಅವರ 'ಗಾಂಧಿಬಂದ' ಕಾದಂಬರಿಯನ್ನು ನಾಟಕವಾಗಿಸುವ ಮೂಲಕ ಈ ತಂಡವು ಸಂವಾದವೊಂದನ್ನು ಹುಟ್ಟು ಹಾಕಿತು. ಈ ನಾಟಕ ನಾಡಿನ ಒಳ ಹೊರಗೂ ಪ್ರಸಿದ್ಧಿಯನ್ನು ಪಡೆಯಿತು. ರಂಗಮಂಟಪ ರಂಗಗೀತೆಗಳ ತಂಡವನ್ನು ರೂಪಿಸಿದ್ದು ನಾಟಕ ಮಾತ್ರವಲ್ಲದೆ ರಂಗಾಭಿರುಚಿ ಬೆಳೆಸುವ ಕಮ್ಮಟಗಳನ್ನು ನಡೆಸುವ ಉದ್ದೇಶವನ್ನೂ ಇಟ್ಟುಕೊಂಡಿದೆ. ಎಂಬತ್ತಕ್ಕೂ ಹೆಚ್ಚು ನಟನಟಿಯರ ಬಳಗ ರಂಗಮಂಟಪದ ಬಲ.

ಕನ್ನಡದ ಪ್ರಸಿದ್ಧ ಕತೆಗಾರ್ತಿ ವೈದೇಹಿ ಅವರ – ಅಕ್ಕು, ಪುಟ್ಟಮ್ಮತ್ತ ಮತ್ತು ಮೊಮ್ಮಗಳು, ಅಮ್ಮಚ್ಚಿಯ ನೆನಪುಗಳು – ಈ ಮೂರು ಕಥೆಗಳನ್ನು ಆಧರಿಸಿ ಹೆಣೆದ 'ಅಕ್ಕು' ಸೂಕ್ಷ್ಮ ಸಂವೇದನೆಯ ವಿಭಿನ್ನ ಸಂಭಾಷಣೆಯ ಒಂದು ರಂಗಕೃತಿ. ಹೆಣ್ಣು ತನ್ನ ಅಸ್ತಿತ್ವಕ್ಕಾಗಿ ನಿರಂತರ ಹೋರಾಟ ನಡೆಸುವ ವಿವಿಧ ಸ್ತರಗಳನ್ನು ತಣ್ಣನೆಯ ಅಭಿವ್ಯಕ್ತಿಗಳ ಮೂಲಕ ವಿವರಿಸುವ ಪ್ರಯತ್ನ ಈ ನಾಟಕದ ಮುಖ್ಯ ಆಶಯ. ಒಂದು ಕುಟುಂಬದ ಚೌಕಟ್ಟಿನಲ್ಲಿ ಅಕ್ಕು ತನ್ನ ಅಸ್ಮಿತೆಗಾಗಿ ನಡೆಸುವ ಹೋರಾಟವನ್ನು ಬುದ್ಧಿ ಭ್ರಮಣೆಯನ್ನಾಗಿ ನೋಡುವ ಪರಿ ಒಂದೆಡೆ. ಮಾನಸಿಕ-ದೈಹಿಕ ದೌರ್ಜನ್ಯ ಮಾಡುತ್ತಾ ಮಹಿಳೆಯನ್ನು ಉಪಭೋಗಿ ವಸ್ತುವಾಗಷ್ಟೇ ಸೀಮಿತಗೊಳಿಸಿ, ತಮಗೆ ಬೇಕಾದಂತೆ ಆಡಿಸುವ, ನಿಯಂತ್ರಿಸುವ ನಾಟಕದ ಪುರುಷ ಪಾತ್ರಗಳು, ಪುರುಷ ಪ್ರಧಾನ ವ್ಯವಸ್ಥೆಯ ಭಿನ್ನ ಭಿನ್ನ ಮುಖಗಳ ಸಮ್ಮಿಳಿತ ರೂಪಗಳಾಗಿ ಕಾಡುತ್ತವೆ. ಹೆಣ್ಣು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಕಾಣದ ಸೂತ್ರದ ಬಂಧಗಳಲ್ಲಿ ಉಸಿರುಗಟ್ಟಿ ನರಳುತ್ತಿರುವ ಈ ವರ್ತಮಾನದಲ್ಲಿ ಅಕ್ಕು ಬಿಡುಗಡೆಯ ಹಕ್ಕಿಯಾಗಿ ಗೋಚರಿಸುತ್ತಾಳೆ.

ಆಹ್ವಾನಿತ ನಾಟಕ

೯-೧೨
ಮಧ್ಯಾಹ್ನದ ಕಾರ್ಯಕ್ರಮಗಳು

೯ ಅಕ್ಟೋಬರ್ - ಮಧ್ಯಾಹ್ನ ೨.೩೦ - ಜನಮನದಾಟ ನಾಟಕ
ಸತ್ಯಶೋಧಕ
ರಚನೆ: ಜಿ.ಪಿ. ದೇಶಪಾಂಡೆ, ಅನುವಾದ: ಡಿ.ಎಸ್. ಚೌಗಲೆ
ನಿರ್ದೇಶನ: ಅತುಲ್ ಪೇಠ
ಮಹಾತ್ಮ ಜ್ಯೋತಿಬಾ ಫುಲೆ ಮತ್ತು ಸಾವಿತ್ರಿ ಬಾಯಿ ಫುಲೆ ಅವರ ಬದುಕನ್ನು ಸಮಕಾಲೀನ ಸಂದರ್ಭಕ್ಕೆ ಪ್ರಸ್ತುತಗೊಳಿಸಿಕೊಳ್ಳುವ ನಾಟಕ.

೯ ಅಕ್ಟೋಬರ್ - ಮಧ್ಯಾಹ್ನ ೨.೩೦ - ನೀಲಗಾರರ ಕಥನ ಪ್ರಸ್ತುತಿ
ಮೈಸೂರು ಗುರುರಾಜ ಮತ್ತು ತಂಡ
ಕನ್ನಡದ ಪ್ರಸಿದ್ಧ ಜಾನಪದ ಕಥನಕಾವ್ಯಗಳಿಂದ ಆಯ್ದ ಭಾಗಗಳ ಪ್ರಸ್ತುತಿ.

೧೦ ಅಕ್ಟೋಬರ್ - ಮಧ್ಯಾಹ್ನ ೨.೩೦ - ಥಿಯೇಟರ್ ಸಮುರಾಯ್ ನಾಟಕ
ಹಸಿದ ಕಲ್ಲುಗಳು
ನಿರ್ದೇಶನ: ಹೈಸ್ನಾಮ್ ತೊಂಬಾ
ರವೀಂದ್ರನಾಥ ಠಾಕೂರರ ಹಂಗ್ರೀ ಸ್ಟೋನ್ಸ್ ಕಥೆಯನ್ನಾಧರಿಸಿದ ಪ್ರಯೋಗ; ಶಿಥಿಲ ಅರಮನೆಯೊಂದರಲ್ಲಿ ನಿಂತಿರುವ ಕಲ್ಲಿನ ಪ್ರತಿಮೆಗಳ ಯಾತನಾಮಯ ನೆನಪಿನ ಕಥನ.

೧೧ ಅಕ್ಟೋಬರ್ - ಮಧ್ಯಾಹ್ನ ೨.೩೦
ಕವಿಗೋಷ್ಠಿ
ಯೋಗರಾಜ ಭಟ್, ಪ್ರತಿಭಾ ನಂದಕುಮಾರ್, ಲಲಿತಾ ಸಿದ್ದಬಸವಯ್ಯ, ಆರಿಫ್ ರಾಜಾ

೧೨ ಅಕ್ಟೋಬರ್ - ಮಧ್ಯಾಹ್ನ ೨.೩೦
ಕಥಾಗೋಷ್ಠಿ
ವಿಕ್ರಂ ಹತ್ವಾರ್, ಶಾಂತಿ ಕೆ.ಎ., ನಾಗರಾಜ ವಸ್ತಾರೆ

೯-೧೨
ಹಗಲಿನ ಕಾರ್ಯಕ್ರಮಗಳು

ಈ ಶಿಬಿರದಲ್ಲಿ ಕರ್ನಾಟಕ ಮತ್ತು ಹೊರಗಿನ ಹಲವು ಪ್ರಮುಖರು ಸಂಪನ್ಮೂಲ ವ್ಯಕ್ತಿಗಳಾಗಿಯೂ ಮತ್ತು ಕರ್ನಾಟಕದ ವಿವಿಧ ಭಾಗಗಳ ಸು. ೧೫೦ ಜನ ಆಭ್ಯರ್ಥಿಗಳು ಶಿಬಿರಾರ್ಥಿಗಳಾಗಿಯೂ ಭಾಗವಹಿಸುತ್ತಾರೆ. ಪ್ರತಿದಿನ ಬೆಳಿಗ್ಗೆ ೯.೩೦ರಿಂದ ಸಂಜೆ ೬ರವರೆಗೆ ನಡೆಯುವ ಹಗಲಿನ ಕಾರ್ಯಕ್ರಮಗಳಲ್ಲಿ ಉಪನ್ಯಾಸ ಪ್ರಾತ್ಯಕ್ಷಿಕೆಗಳೂ ಹಾಗೂ ಸಂವಾದ-ಚರ್ಚೆಗಳೂ ನಡೆಯುತ್ತವೆ. ಈ ಬಾರಿಯ ಶಿಬಿರವು 'ಚಿಂತನೆ-ಪ್ರತಿಚಿಂತನ' ಎಂಬ ವಿಷಯವನ್ನು ಕುರಿತು ಕೇಂದ್ರೀಕರಿಸುತ್ತದೆ. ಇವತ್ತಿನ ಕಾಲವು ತನ್ನ ಸಂದರ್ಭಕ್ಕೆ ತಕ್ಕಂತೆ ಬೇರೆಬೇರೆ ಕ್ಷೇತ್ರಗಳಲ್ಲಿ ಮತ್ತು ಕಲಾಪ್ರಕಾರಗಳಲ್ಲಿ ರೂಪಿಸಿಕೊಂಡ ಚಿಂತನೆಗಳು ಎಷ್ಟು ಉಪಯುಕ್ತ ಅಥವಾ ಅಲ್ಲ? ಅದಕ್ಕೆ ಪ್ರತಿಯಾಗಿ ಬರುತ್ತಿರುವ ಅಥವಾ ಬರಬೇಕಾದ ಪ್ರತಿಚಿಂತನೆಗಳೇನು? - ಇತ್ಯಾದಿ ಪ್ರಶ್ನೆಗಳನ್ನಿಟ್ಟುಕೊಂಡು ವಿದ್ಯಾರ್ಥಿ-ವಿದ್ವಾಂಸರಿಬ್ಬರಿಗೂ ಮುಟ್ಟಬಹುದಾದ ರೀತಿಯಲ್ಲಿ ಚರ್ಚಿಸುವುದು ಶಿಬಿರದ ಗುರಿಯಾಗಿದೆ. ಉಪನ್ಯಾಸ ಮತ್ತು ಚರ್ಚೆಗಳೇ ಅಲ್ಲದೆ, ಕಾವ್ಯ-ನಾಟಕ-ಕಥಾ ಮಾಧ್ಯಮದ ಕೆಲವು ಕಿರುಪ್ರಾತ್ಯಕ್ಷಿಕೆ ಮತ್ತು ಗೋಷ್ಠಿಗಳು ಕೂಡಾ ಶಿಬಿರದಲ್ಲಿ ನಡೆಯಲಿವೆ. ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಗಳನ್ನು ನೀಡಲಿರುವ ಅತಿಥಿಗಳ ಪಟ್ಟಿ ಹೀಗಿದೆ:

ಶಿವ ವಿಶ್ವನಾಥನ್, ಸಮೀಕ್ ಬ್ಯಾನರ್ಜಿ, ಗಣೇಶ್ ದೇವಿ, ಎಚ್.ಎಸ್. ವೆಂಕಟೇಶಮೂರ್ತಿ, ವೈದೇಹಿ, ಎಚ್.ಎಸ್. ಶಿವಪ್ರಕಾಶ್, ಅನಸ್ಯ ವಾಜಪೇಯಿ, ದೇವದತ್ತ ಪಟ್ನಾಯಕ್, ಸುಂದರ ಸಾರುಕ್ಕೈ, ಯೋಗೇಂದ್ರ ಯಾದವ್, ಕೃಷ್ಣಮೂರ್ತಿ ಹನೂರು, ಎನ್.ಎಸ್. ತಾರಾನಾಥ್, ಎಂ.ಎಸ್. ಆಶಾದೇವಿ, ಜೆ. ಶ್ರೀನಿವಾಸಮೂರ್ತಿ, ಬಿ.ಎನ್. ಸುಮಿತ್ರಾಬಾಯಿ, ಬಿ.ಎಂ. ಪುಟ್ಟಯ್ಯ, ಜೆ.ಎಸ್. ಸದಾನಂದ, ವಿವೇಕ ಶಾನಭಾಗ, ಎಂ.ಎಸ್. ಶ್ರೀರಾಮ್, ಜಯಂತ ಕಾಯ್ಕಿಣಿ, ಲಕ್ಷ್ಮೀಶ ತೋಳ್ಪಾಡಿ – ಮೊದಲಾದವರು.

Supported by

Rohini Nilekani, Bangalore

Canara Bank Ltd., Bangalore

Karnataka Bank Ltd., Mangalore

Sahitya Akademi, NewDelhi

ನೀನಾಸಮ್ ಸಂಸ್ಕೃತಿ ಶಿಬಿರ ೨೦೧೫

೮ ರಿಂದ ೧೨
ಅಕ್ಟೋಬರ್ ೨೦೧೫
ಸಂಜೆಯಸಾಂಸ್ಕೃತಿಕ ಕಾರ್ಯಕ್ರಮಗಳಿಗೆ
ಸ್ವಾಗತ